ಇದ್ದ ಸುಗುಣಾ ಟೀಚರ್, 'ಅರೇ ಕೇತಕಿ, ನೀವು ಅದೇ ಸರ್‌ನೇಮ್ ಕಂಟಿನ್ಯೂ ಮಾಡ್ತಾ ಇದೀರಾ, ಗುಡ್. ಮದ್ವೆ ಆದ ತಕ್ಷಣ ಹೆಸರು ಬದಲಾಯಿಸೋದೆಲ್ಲಾ ಹಳೇ ಕಾಲದಲ್ಲಾಯಿತು. ಅದಿರಲಿ, ಅದೇನು ಮದ್ವೆ ಮರುದಿನನೇ ಬಂದ್ಬಿಟ್ಟಿದೀರಾ! ಯಾರಾದ್ರು ನೀವು ಬರದಿದ್ರೆ ಶಾಲೆ ನಡೆಯಲ್ಲ ಅಂದ್ರೇನು' ಎಂದು ನಕ್ಕಾಗ ಕೇತಕಿಯೂ ಸುಮ್ಮನೆ ನಕ್ಕಳು. ಊಟದ ಡಬ್ಬಿಯ ಬ್ಯಾಗ್ ಎತ್ತಿಕೊಂಡು ಸುಗುಣಾ ಟೀಚರಿನೊಂದಿಗೆ ಅಧ್ಯಾಪಕರ ಕೊಠಡಿಗೆ ಬಂದಾಗಲೂ ಕೇತಕಿಗೆ ಅಲ್ಲೂ ಅದೇ ಪ್ರಶ್ನೆ, ಮದ್ವೆ ಮರುದಿನನೇ ಯಾಕ್ ಬರಕ್ಕೆ ಹೋದ್ರಿ ಎಂದು. ನಗುತ್ತಾ ಉತ್ತರಿಸುತ್ತಿದ್ದ ಕೇತಕಿಯ ಮನಸ್ಸು ಮಾತ್ರ ಸಂದೀಪನ ಸುತ್ತ ತಿರುಗಲಾರಂಭಿಸಿತು. ಎಂಥದೋ ಸೆಳೆತವಪ್ಪಾ ಈ ಮನುಷ್ಯನಲ್ಲಿ! ಎಂದುಕೊಂಡಳು. ಜೊತೆಯಲ್ಲಿ ಅವಳಿಗೆ ತಾನು ಈಗ ಸಂದೀಪನ ಪತ್ನಿ ಎನ್ನುವ ಯೋಚನೆ ಪುಳಕ ಹುಟ್ಟಿಸಿತು.

ಶಾಲೆ ಬಿಡುವ ಹೊತ್ತಿಗೆ ಹೊರಗೆ ಸಂದೀಪ ಹಾಜರು. ಅಚ್ಚರಿಗೊಂಡವಳಿಗೆ ಮುಲಾಜಿಲ್ಲದೇ ಸಂದೀಪ, 'ದಿನಾ ಬರ್ತೀನಿ ಅಂತ ಅಂದ್ಕೊಬೇಡ. ಸ್ವಲ್ಪ ಕೆಲಸ ಇತ್ತು ಹಾಗೇ ಬಂದೆ' ಎಂದಾಗ ನಕ್ಕು ಬೈಕೇರಿದಳು. ಹಿಂದೆ ಕೂತವಳ ಮನದಲ್ಲಿ ಸಂದೀಪ ನಿಧಾನಕ್ಕೆ ಬೇರೂರತೊಡಗಿದ್ದ. ಬೈಕಿನ ಕುಲುಕಾಟದಲ್ಲಿ ಕೇತಕಿಗೆ ಮುಂದೆ ಕೂತ ಸಂದೀಪನ ಸ್ಪರ್ಶದಿಂದ ಹಿತವೇರುತ್ತಿತ್ತು. ಅರಿವಿಲ್ಲದೇ ಸೊಂಟ ಬಳಸಿದಳು. ತಟ್ಟಂತ, 'ಕುತ್ತಿಗೆ ಒಂದು ಹಿಡೀಬೇಡಾ ಮಾರಾಯ್ತಿ' ಎಂದವನ ಮಾತಿನಿಂದ ನಾಚಿ ಮತ್ತಷ್ಟೂ ಬಳಿ ಸಾರಿ ಕೂತಳು. ಇವನನ್ನು ಅರ್ಥ ಮಾಡ್ಕೊಳ್ಳೋದೇ ಕಷ್ಟವಪ್ಪಾ ಅನಿಸಿತು. ಜೊತೆಯಲ್ಲಿ ಮದುವೆ ಅನ್ನೋ ಬಂಧದ ಬಗೆಗೂ ಅಚ್ಚರಿಯಾಯ್ತು. ನಿನ್ನೆವರೆಗೂ ಇಷ್ಟು ಸಲೀಸಾಗಿ ಕುಳಿತುಕೊಳ್ಳಲು ಆಗುತ್ತಿರಲಿಲ್ಲವೇನೋ. ನಾನೀಗ ಸಂದೀಪನ ಪತ್ನಿ ಎನ್ನುವ ಅರಿವು ಹೇಗೆ ಕೆಲಸ ಮಾಡುತ್ತಿದೆ ಎಂದರೆ ಅವನ ಸ್ಪರ್ಶವೂ ಹಿತವೆನಿಸುತ್ತಿದೆ ಎಂದುಕೊಂಡಳು.

> 'ನಂಗೆ ನನ್ನಿಂದ ಉಳಿಯುವಂಥದ್ದೂ ಏನೂ ಇಲ್ಲ. ಐ ವಾಂಟ್ ಟು ಬಿ ಫರ್ಗಾಟನ್' ಎನ್ನುವ ಅವನ ಮಾತುಗಳೇ ಪದೇ ಪದೇ ಕಿವಿಗೆ ಬಂದು ಅಪ್ಪಳಿಸುತ್ತಿದ್ದವು ಕೇತಕಿಗೆ.

ಕೈಕಾಲು ತೊಳೆದು ಬಟ್ಟೆ ಬದಲಿಸಿ ಬಂದವಳಿಗೆ ಸಂದೀಪ ಕಾಫಿ ನೀಡಿದ. 'ಕಾಫಿ ಕುಡಿ, ತೋಟದ ಕಡೆಗ್ಹೋಗಿ ಬರೋಣಾ...' ಎಂದಾಗ ಸಂತಸವಾಯ್ತು ಕೇತಕಿಗೆ. ಬೇಗಬೇಗ ಕಾಫಿ ಕುಡಿದು ಚಪ್ಪಲಿ ಮೆಟ್ಟಿ ಸಂದೀಪನ ಹಿಂದೆ ಹೊರಟಳು. ಮನೆಯಿಂದ ಒಂದ್ಹತ್ತು ಮೆಟ್ಟಿಲು ಇಳಿದರೆ ಅಲ್ಲಿಂದ ಕಣ್ಣು ಹಾಯಿಸಿದಷ್ಟೂ ದೂರ ಕಾಣುತ್ತದೆ ತೋಟ. ತೋಟದ ಕೊನೆಯಲ್ಲಿ ಸಮಾಧಾನದಿಂದ ಹರಿಯುವ ಅವಿನಾಶಿ ಹೊಳೆ. ಬಿರು ಬೇಸಗೆಯಲ್ಲೂ ಒಣಗದೇ ಹರಿಯುವ ನದಿಯದು. ಅದರತ್ತ ತೋರಿಸಿ ಸಂದೀಪ, 'ನೋಡಲ್ಲಿ ಅವಿನಾಶಿ ನದಿ. ನಾವು ನಾಶವಾದ್ರೂ ಅದು ಹರೀತಾನೇ ಇರುತ್ತೆ' ಎಂದ. ಕೇತಕಿಯ ಮುಖದಲ್ಲಿ ಮೂಡಿದ ಅಸಹನೆ ನೋಡಿ, 'ಹುಂ, ನಮ್ಮನೆಯಲ್ಲೇ ಮೂರ್ನಾಲ್ಕು ತಲೆಮಾರಿಂದ ಗಂಡಸರು ಭಾಳಾ ಬೇಗ, ಅಂದ್ರೆ ನಲವತ್ತು ನಲವತ್ತೈದಕ್ಕೆಲ್ಲಾ ತೀರಿ ಹೋದ್ರು. ಅವಿನಾಶಿ ಮಾತ್ರ ಎಲ್ಲದಕ್ಕೂ ಸಾಕ್ಷಿಯಾಗುತ್ತಾ ಹರಿಯುತ್ತಿದೆ' ಎಂದ.

ಮುಂದೆ ನಡೆಯುತ್ತಿದ್ದ ಸಂದೀಪ ಹೋಗಿ ನಿಂತದ್ದು ಅವನ ಮರದ ಮನೆಯ ಬಳಿ.